ಶ್ರೀ ವಿ. ಧನಂಜಯಕುಮಾರ್.—ದಯವಿಟ್ಟು ಬ್ಯಾಲೆಟ್ ಮಾಡಿಸಬೇಡಿ ಸ್ವಾಮಿ.

ಶ್ರೀ ಎಂ. ಮಹದೇವ್.—ಅಧ್ಯಕ್ಷರೇ, ನನ್ನ ಕಾಲಿಂಗ್ ಅಟೆನ್‌ಷನ್ ಸೋಮವಾರ ಬರುತ್ತದೆಯೇ ?

ಅಧ್ಯಕ್ಷರು.—ನೋಡೋಣ. ನಾನು ಆಗಲೇ ಉತ್ತರ ಹೇಳಿದ್ದೇನೆ.

ನಿಯಮ ೩೩೪ರ ಮೇರೆಗೆ

(i) ಟೌನ್ ಮುನಿಸಿಪಲ್ ಯಾದಗೀರ್ ಡೆವಲ್‌ಮೆಂಟ್ ವರ್ಕ್ಸ್ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ಟೌನ್ ಮುನಿಸಿಪಲ್ ಯಾದಗೀರ್ ಡೆವಲಪ್‌ಮೆಂಟ್ ವರ್ಕ್ಸ್ ವಿಚಾರದ ಒಂದು ಸಭೆ ಸೇರಿ ಅದರಲ್ಲಿ ಒಂದು ರೆಸಲ್ಯೂಷನ್‌ನ್ನು ಪಾಸು ಮಾಡಿದ್ದಾರೆ. ಡೆಪ್ಯೂಟಿ ಕಮೀಷನರ್‌ರವರು ಆ ಕೆಲಸವನ್ನು ಸಸ್ಪೆಂಡ್ ಮಾಡಿದ್ದಾರೆ. ಅದರಿಂದಾಗಿ ಅಲ್ಲಿ ೩ ತಿಂಗಳಿಂದಲೂ ಕೂಡ ಕೆಲಸ ನಡೆಯುತ್ತಾ ಇಲ್ಲ. ಆ ವರ್ಕ್ಸ್‌ಗೆ ಒಂದು ಸಯಾಪೈಸೆಯನ್ನು ಸಹ ರಿಲೀಸ್ ಮಾಡದೇ ಇರುವುದರಿಂದ ಅಲ್ಲಿ ಯಾವ ಕೆಲಸವೂ ನಡೆದಿಲ್ಲ. ಜೊತೆಗೆ ಸಂಬಂಧಪಟ್ಟ ಕಂಟ್ರಾಕ್ಟರುಗಳಿಗೆ, ದುಡ್ಡು ಕೊಡದೇ ಇರುವುದರಿಂದ ಅಲ್ಲಿ ಕೆಲಸ ಮಾಡುವ ಫ್ರಿಪರ್ಸ್‌ಗೆ, ಇನ್ನು ಇತರರಿಗೆ ಸಂಬಳ ಕೊಡುವುದು ನಿಂತು ಹೋಗಿದೆ. ಈ ಕೆಲಸವನ್ನು ಅವರು ಏತಕ್ಕಾಗಿ ಸಸ್ಪೆಂಡ್ ಮಾಡಿದರೋ ನನಗೆ ಗೊತ್ತಿಲ್ಲ. ಅದಕ್ಕಾಗಿ ಮಾನ್ಯ ಮಂತ್ರಿಗಳು ಇದರ ಬಗ್ಗೆ ತಕ್ಷಣ ಕಾರ್ಯಕ್ರಮತೆಗೆದುಕೊಂಡು, ಆ ಟೌನ್‌ಮುನಿಸಿಪಲ್ ಕೌನ್ಸಿಲ್‌ನಲ್ಲಿ ಇದರಬಗ್ಗೆ ಏನು ಒಂದು ರೆಸಲ್ಯೂಷನ್ ಪಾಸು ಮಾಡಿದ್ದಾರೆ ಅದನ್ನು ಇಂಪ್ಲಿಮೆಂಟ್ ಮಾಡಿಸದೇ ಹೋದರೆ ಆ ಡೆವಲಪ್‌ಮೆಂಟ್ ವರ್ಕ್ಸ್ ನಿಂತು ಹೋಗುತ್ತದೆ. ಯಾವ ಕಾರಣಕ್ಕಾಗಿ ಡಿ.ಸಿ. ಅವರು ಆ ಕೆಲಸಗಳನ್ನು ಸಸ್ಪೆಂಡ್ ಮಾಡಿದರು ಅನ್ನುವುದಕ್ಕೆ ಕಾರಣವನ್ನು ಕಂಡುಹಿಡಿಯಬೇಕು ಎಂದು ನಾನು ಹೇಳುತ್ತೇನೆ. ಇದು ಬಹಳ ಮುಖ್ಯವಾದ ವಿಷಯವಾದುದರಿಂದ ನಾನು ಕೇಳುತ್ತಿದ್ದೇನೆ.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಡಳಿತ ಸಚಿವರು).—ಆದರ ಬಗ್ಗೆ ತಕ್ಕ ಮಾಹಿತಿಯನ್ನು ಪಡೆದು ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

(ii) ಗೌರಿಬಿದನೂರು ಮತ್ತು ಕೊಳ್ಳೇಗಾಲದ ಸಕ್ಕರೆ ಕಾರ್ಖಾನೆಯ ಬಗ್ಗೆ

ಶ್ರೀ ಮೈಕಲ್ ಬಿ. ಫರ್ನಾಂಡೀಸ್.—ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಒಟ್ಟು ೨೨ ಸಕ್ಕರೆ ಕಾರ್ಖಾನೆಗಳು ಇವೆ. ಅದರಲ್ಲಿ ಗೌರಿಬಿದನೂರು ಸಕ್ಕರೆ ಕಾರ್ಖಾನೆ ಮತ್ತು ಕೊಳ್ಳೇಗಾಲದ ಸಕ್ಕರೆ ಕಾರ್ಖಾನೆ ಈ ಎರಡು ಕೋ ಆಪರೇಟೀವ್ ಸೆಕ್ಟಾರ್‌ನಲ್ಲಿ ನಡೆಯುತ್ತಾ ಇರುವುದು ತಮಗೆ ಗೊತ್ತಿದೆ. ಈಗ ಆ ಎರಡು ಜಾಗದಲ್ಲಿ ಏನಾಗಿದೆ ಎಂದರೆ ಆ ಭಾಗದ ರೈತರು ಕಬ್ಬಿಗೆ ೨೦೦ ರೂಪಾಯಿ ದರ ಕೊಡಬೇಕು ಎಂದು ಕೇಳುತ್ತಿದ್ದಾರೆ, ಅದಲ್ಲದೆ ಆ ಭಾಗದ ರೈತರಿಗೆ ಹಿಂದಿನ ಬಾಕಿಯೂ ಸಹ ಕೊಡಬೇಕಾಗಿದ್ದುದನ್ನು ಕೂಡ ಕೊಟ್ಟಿಲ್ಲ. ಈ ಎರಡು ಜಾಗದಲ್ಲಿ ಒಟ್ಟು ಎರಡು ಸಾವಿರ ಕಾರ್ಮಿಕರು ಇದ್ದಾರೆ. ಅವರಿಗೆ ಅಲ್ಲಿ ಕೆಲಸ ಕೊಡದೆ ಆ ಕಾರ್ಖಾನೆಯ ಕೆಲಸವನ್ನು ನಿಲ್ಲಿಸಿದ್ದಾರೆ. ಅವರು ದಿವಸ ಪಾದಯಾತ್ರೆಯಲ್ಲಿ ಬಂದು ಇಲ್ಲಿ ಸರದಿ ಉಪವಾಸ, ಮುಷ್ಕರವನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದವರು ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಾರೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಬಿ. ಎಲ್. ಗೌಡ (ಮಾನ್ಯ ಕೃಷಿ ಸಚಿವರು).—ಮಾನ್ಯ ಸದಸ್ಯರು ಆದರ ಬಗ್ಗೆ ಏನು ವಿಷಯಗಳನ್ನು ಹೇಳಿದ್ದಾರೆ ಅದರ ಬಗ್ಗೆ ಮಾಹಿತಿಗಳನ್ನು ತರಿಸಿ ನೋಡಿ ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.